ಶೀನ, ಪೂರ್ತಿ ಸಭ್ಯ ಎಂದು ಖುಷಿಯಲ್ಲಿ ಹೋಗಿ ಮಾಡಬಾರದ್ದು ಮಾಡಿ ಹಣವನ್ನೂ ಕೊಡದೇ ಹೊರಹಾಕಿದ ಚಿಕ್ಕಪೇಟೆ ಜವಳಿ ಅಂಗಡಿಯ ಸೇಟುನ ಮಗ ಖೇತಾನ್ ನೆನಪಾಗುತ್ತಿದ್ದ. ಅಷ್ಟು ಹೊತ್ತಿಗಾಗಲೇ ಪಂಕಜಳ ಮುಂದೆ ಪ್ರತ್ಯಕ್ಷವಾಗಿದ್ದೇ ಶಿರ್ಕ್ಯ ಮತ್ತು ಬಶೀರ.

ಕಾರ್ಡ್ ರೋಡಿನಲ್ಲಿ ಪೆಟ್ರೋಲ್ ಹಾಕಲು ಆಟೊ ನಿಲ್ಲಿಸಿದ್ದಾಗ ಶಿರ್ಕ್ಯ ಕ್ರಾಕ್ ಜಾಕ್ ಬಿಸ್ಕಿಟ್ ಪ್ಯಾಕ್ ಖರೀದಿಸಿ ಎಲ್ಲರಿಗೂ ಎರಡೆರಡು ಕೊಟ್ಟಿದ್ದ. ಆಗ ಪಂಕಜಳೂ ಅವನಿಂದ ತೆಗೆದುಕೊಂಡು ತಿಂದಿದ್ದಳು. ಅವಳಿಗೆ ಕ್ರಾಕ್ ಜಾಕ್‌ನಿಂದ ಹೊಟ್ಟೆ ತುಂಬುವುದಿರಲಿ ಅದರಲ್ಲಿದ್ದ ಜೀರಿಗೆ, ವಾಮದ ಕಾಳು ಹಲ್ಲಿಗೆ ಸಿಕ್ಕಿ ಅರ್ಧ ಗಂಟೆಯ ನಂತರ ವಾಂತಿ ಬಂದಂತಾಗಿತ್ತು. ಮಧ್ಯದಲ್ಲಿ ಕುಡಿಯಲು ನೀರೂ ಸಿಗಲಿಲ್ಲ. ಅಲ್ಲಿದ್ದವರ ಹತ್ತಿರ ಮನಸಾರೆ ಮಾತನಾಡಬೇಕೆಂದೂ ಅನಿಸುತ್ತಿರಲಿಲ್ಲ. ತನ್ನಂತೇ ಇರುವ ಉಳಿದವರು ಮಾಡುವಂತೆ ಸಿಕ್ಕ ಎರಡು ಮೂರು ತಾಸಲ್ಲಿ ಬಿರ್ಯಾನಿ ಕೊಡಿಸು, ಡ್ರೆಸ್ ಕೊಡಿಸು, ಕ್ವಾಟರ್ ಕೊಡಿಸು ಎಂದೆಲ್ಲಾ ಪೀಡಿಸುವ ಮನಃಸ್ಥಿತಿ ಇಲ್ಲದಿದ್ದರೂ ಜನರನ್ನು ನೋಡಿ 'ಮಾಡಿದರೇನು ತಪ್ಪು' ಎಂಬುದು ಪಂಕಜಳ ಮನಸಿನಲ್ಲಿದ್ದಿದ್ದಂತೂ ಹೌದು. ರಾಜಾಜಿನಗರದ ಇ.ಎಸ್.ಐ ಹಾಸ್ಪಿಟಲ್ ದಾಟಿದ ನಂತರ ಪೂರ್ತಿ ಬಶೀರನ ಕೈ ಪಂಕಜಳ ಹೊಟ್ಟೆ ಸವರುತ್ತಿತ್ತು. ಆಗಲೇ ಅವಳಿಗೆ ಹಸಿವಾಗಿತ್ತು.

ಆಟೊದವನೊಂದಿಗೆ ಗಲಾಟೆಯಾದ ನಂತರ ಯಾರ ಕಣ್ಣಿಗೆ ಬೀಳದಂತೆ ಬಶೀರ ಪಂಕಜಳನ್ನು ಹಾಸ್ಟೆಲಿನ ಒಳಗೆ ಕರೆದುಕೊಂಡು ಪೂರ್ತಿ ಹಿಂದಿರುವ 'ಸಿ' ಬ್ಲಾಕಿನ ರೂಮಿನಲ್ಲಿ ಅಡಗಿಸಿ ಉಚ್ಚೆಹೊಯ್ಯಲೂ ಹೊರಗೆ ಹೋಗಬಾರದೆಂದು ತಾಕೀತು ಮಾಡಿ ಹೊರನಡೆದಿದ್ದ. ಅದಾದ ಹದಿನೈದು ನಿಮಿಷದಲ್ಲಿ ಯಾವಾಗ ಪೊಲೀಸರು ಬಂದಿದ್ದು ಗೊತ್ತಾಯಿತೂ ಆಗಂತೂ ಮತ್ತೆ ಪಂಕಜಳಿದ್ದ ರೂಮಿಗೆ ಹೋಗಿ ಅವಳನ್ನು ಕರೆದುಕೊಂಡು ಇನ್ನೊಂದು ರೂಮಿಗೆ ಬದಲಿಸಿ ಅಲ್ಲೇ ಅಡಗಲು ಹೇಳಿ ಹೊರಗಿನಿಂದ ಬಾಗಿಲು ಹಾಕಿದ್ದ. ಮಧ್ಯಾಹ್ನ ಮೂರು ಗಂಟೆಗೆ ಒಂದು ಸ್ವಲ್ಪ ಅನ್ನ ತಿಂದಿದ್ದು ಬಿಟ್ಟರೆ ಹೊಟ್ಟೆಗೆ ಏನೂ ಇರಲಿಲ್ಲ. ಈಗ ಸುಮಾರು ರಾತ್ರಿ ಹನ್ನೆರಡು ಮುಕ್ಕಾಲು ಆಗಿತ್ತು. ಒಂದು ತೊಟ್ಟು ನೀರೂ ಸಿಗಲಿಲ್ಲ. ಹಸಿವಿನಿಂದ ಒಂದು ಕಡೆ ನಿತ್ರಾಣವಾದರೆ ಇನ್ನೊಂದು ಕಡೆ ಸುಮಾರು ಹೆಚ್ಚಾಗೇ ತಲೆ ನೋವು ಪ್ರಾರಂಭವಾಗಿತ್ತು.

ಬಶೀರನಿಗೆ ಆ ಗಲಾಟೆ ಈ ಗಲಾಟೆಯೆಲ್ಲ ಮುಗಿದಂತೆ ಅನಿಸುತ್ತಿತ್ತು. ಹಾಸ್ಟೆಲ್ ಶಾಂತವಾಗುತ್ತಿತ್ತು. ಹೆಚ್ಚಿನವರೆಲ್ಲ ಮಲಗಿ ಚಿಕ್ಕ ನಿದ್ರೆ ಮುಗಿಸಿ ಮಗ್ಗಲು ಮಗುಚಿದ್ದರು. ಎದುರಿಂದ ಬೀಸುವ ಗಾಳಿಯಲ್ಲಿ ತಂಪಿನ ಸುಖ ಮುಗಿದು ಮೈಗೆ ಇರಿಯುವ ಚಳಿ ಪ್ರಾರಂಭವಾಗಿತ್ತು. ಸ್ಟೋರ್ ರೂಮಿನ ವಾಸನೆ ಮೂಗಿಗೆ ಹಿತವೆನಿಸುವಂತಾಗಿತ್ತು. ರೂಮಿನ ಒಳಗೆ ಕತ್ತಲಿದ್ದರೂ ಈಗ ಪೂರ್ತಿ ಅಂದರೆ ಸೈಕ್ಲೋಸ್ಟೈಲ್ ಮಶಿನ್ನಿನ ಆನ್ ಆಫ್‌ನ ಒಂದು ಮತ್ತು ಜೀರೊ ಸ್ಪಷ್ಟವಾಗಿ ಕಾಣುತ್ತಿತ್ತು. ತಲೆಯಲ್ಲಿ ಮಾತ್ರ ಒಂದು ಸಂಜೆಯಲ್ಲಿ ಇಷ್ಟೆಲ್ಲಾ ಆಗಬೇಕೆ? ಎಂದುಕೊಳ್ಳುತ್ತಲೇ ಪಂಕಜಳ ಚಿತ್ರ ದೊಡ್ಡಗಾಗುತ್ತಿತ್ತು. ಅಷ್ಟು ಹೊತ್ತಿಗೆ ಆತನ ಚೇಲ ಬಾಗಿಲು ತೆಗೆದ. 'ಸ್ವಲ್ಪ ಬೇಗನೇ ಬಂದಿದ್ದರೆ ಸಾಯ್ತಿದ್ಯ ಲೌಡೆ' ಎನ್ನುತ್ತ ಸರ ಸರನೆ ಕೈ ತೊಳೆಯುವ ಜಾಗಕ್ಕೆ ಹೋಗಿ ಹೊಟ್ಟೆ ತುಂಬಾ ನೀರು ಕುಡಿದು ಎದೆ ಬೆನ್ನೆಲ್ಲ ಒದ್ದೆ ಮಾಡಿಕೊಳ್ಳುತ್ತ ತಲೆ ಕೂದಲಿಗೆ ನೀರು ಸಿಂಪಡಿಸಿಕೊಳ್ಳುತ್ತಾ ಚೇಲನ ಕೈಯ್ಯಿಂದ ಚಿಕ್ಕ ನೀರು ಬಾಟಲಿ ಕಸಿದುಕೊಂಡು 'ಸಿ' ಬ್ಲಾಕ್ ಕಡೆ ಓಡಿದ. ಹಾಸ್ಟೆಲ್ ನಿಶ್ಯಬ್ದವಾಗಿತ್ತು.

'ಸಿ' ಬ್ಲಾಕಿನ ಒಳಗೆ ಹೋಗಿದ್ದೇ ಪಂಕಜಳಿದ್ದ ರೂಮಿನ ಬೀಗ ತೆಗೆದು ರೂಮಿನವರು ಬಳಸುವ ಟೇಬಲ್ ಲ್ಯಾಂಪ್ ಹಚ್ಚಿದ. ಒಂದು ಕಡೆ ಕಣ್ಣೂ ಪೂರ್ತಿ ತೆಗೆಯಲಾಗದ ಪಂಕಜ ಬಶೀರನನ್ನು ನೋಡಿ 'ಊಟ ಕೊಡೊ ಬೋಳಿಮಗನೇ' ಎಂದು ಹಾಸ್ಟೆಲಿನ ರೂಮೇ ಕಂಪಿಸುವಂತೆ ಕಿರುಚಿಕೊಂಡಳು. ಐದು ತಾಸಿಗೂ ಹೆಚ್ಚು ಬಂಧಿಯಾಗಿ ಈಗ ಬೆಳಕನ್ನು ಕಂಡ ಅವಳಿಗೆ ಇನ್ನಷ್ಟು